# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1359

ಸದಸ್ಯರ ಹೆಸರು : ಶ್ರೀ ಪಿ.ಆರ್.ರಮೇಶ್

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 30.12.2022

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಅದರ ಅಧೀನದ ನಿಗಮಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ನೀಡುತ್ತಿರುವ ವೇತನದ ಹಣದ ಮೂಲ ಯಾವುದು; ಸದರಿ ವೇತನದ ಹಣವನ್ನು ರಾಜ್ಯ ಸರ್ಕಾರದಿಂದ ನೀಡಲಾಗುತ್ತಿದೆಯೆ ಅಧಿಕಾರಿ ಹಾಗೂ ಸಿಬ್ಬಂದಿಗಳ ವೇತನವನ್ನು ರಾಜ್ಯ ಸರ್ಕಾರದಿಂದ ಪಾವತಿಸಲಾಗುತ್ತಿದೆಯೇ ಅಥವಾ ಸಂಸ್ಥೆಯಿಂದ ಪಾವತಿಸಲಾಗುತ್ತಿದೆಯೇ; ವೇತನವನ್ನು ಪಾವತಿಸಲು ಪ್ರತಿ ಮಾಹೆ ಎಷ್ಟು ಮೊತ್ತ ಬೇಕಾಗಿರುತ್ತದೆ;(ಸಂಪೂರ್ಣ ಮಾಹಿತಿಯನ್ನು ಒದಗಿಸುವುದು)</td><td>ಕ.ರಾ.ರ.ಸಾ.ನಿಗಮ, ಬೆಂ.ಮ.ಸಾ.ಸಂಸ್ಥೆ, ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ. ನಿಗಮದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ನಿಗಮದಲ್ಲಿ ಸಂಗ್ರಹವಾಗುತ್ತಿರುವ ಸಾರಿಗೆ ಆದಾಯ ಹಾಗೂ ಇತರ ಆದಾಯಗಳ ಮೂಲದಿಂದ ವೇತನವನ್ನು ಪಾವತಿ ಮಾಡಲಾಗುತ್ತಿದೆ.<br>ಆದರೆ, ಕೋವಿಡ್-19ರ ಕಾರಣದಿಂದಾಗಿ ನಿಗಮಗಳು ಎದುರಿಸುತ್ತಿದ್ದ ಆರ್ಥಿಕ ಸಂಕಷ್ಟವನ್ನು ಪರಿಗಣಿಸಿ, ಸರ್ಕಾರವು ಸಾರಿಗೆ ಸಂಸ್ಥೆಗಳ ನೌಕರರ ವೇತನ ಪಾವತಿಗಾಗಿ 2020-21 ಹಾಗೂ 2021-22ನೇ ಸಾಲಿನಲ್ಲಿ ಈ ಕೆಳಕಂಡಂತೆ ವಿಶೇಷ ಅನುದಾನ ಬಿಡುಗಡೆಗೊಳಿಸಿರುತ್ತದೆ:<br>(ರೂ.ಕೋಟಿಗಳಲ್ಲಿ)
<table>
<tr><th>ಕ್ರ.ಸಂ</th><th>ಸಂಸ್ಥೆ</th><th>ಮೊತ್ತ</th></tr>
<tr><td>1</td><td>ಕ.ರಾ.ರ.ಸಾ.ನಿಗಮ</td><td>799.41</td></tr>
<tr><td>2</td><td>ಬೆಂ.ಮ.ಸಾ.ಸಂಸ್ಥೆ</td><td>1272.60</td></tr>
<tr><td>3</td><td>ವಾ.ಕ.ರ.ಸಾ.ಸಂಸ್ಥೆ</td><td>599.58</td></tr>
<tr><td>4</td><td>ಕ.ಕ.ರ.ಸಾ.ನಿಗಮ</td><td>464.03</td></tr>
</table>
ಸದರಿ ಅನುದಾನ ಹಾಗೂ ನಿಗಮಗಳ ಆಂತರಿಕ ಸಂಪನ್ಮೂಲದಿಂದ ನೌಕರರ ವೇತನವನ್ನು ಪಾವತಿಮಾಡಿರುತ್ತದೆ.
<table>
<tr><th>ನಾಲ್ಕೂ ಸಾರಿಗೆ ಸಂಸ್ಥೆಗಳು ವೇತನವನ್ನು ಪಾವತಿಸಲು ಪ್ರತಿ ಮಾಹೆ ಸರಾಸರಿ ಬೇಕಾಗುವ ನಿವ್ವಳ ಮೊತ್ತದ ವಿವರ ಈ ಕೆಳಕಂಡಂತಿರುತ್ತದೆ:<br>ಕ್ರ.ಸಂ</th><th>ಸಂಸ್ಥೆ</th><th>ಬೇಕಾಗುವ ಮೊತ್ತ</th></tr>
<tr><td>1</td><td>ಕ.ರಾ.ರ.ಸಾ. ನಿಗಮ</td><td>84.00</td></tr>
<tr><td>2</td><td>ಬೆಂ.ಮ.ಸಾ.ಸಂಸ್ಥೆ</td><td>67.00</td></tr>
<tr><td>3</td><td>ವಾ.ಕ.ರ.ಸಾ.ಸಂಸ್ಥೆ</td><td>73.00</td></tr>
<tr><td>4</td><td>ಕ.ಕ.ರ.ಸಾ.ನಿಗಮ</td><td>65.00</td></tr>
</table>
</td></tr>
</table>

Scanned with CamScanner

| | | |
|---|---|---|
| | ಅಧೀನದಲ್ಲಿ ಬರುವ ಎಲ್ಲಾ ನಿಗಮಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ವೇತನ ಪರಿಷ್ಕರಣೆ ಮಾಡಬೇಕಾಗಿರುವುದು ಸರ್ಕಾರದ ಗಮನದಲ್ಲಿದೆಯೇ; ಇದ್ದಲ್ಲಿ ಯಾವ ದಿನಾಂಕದಿಂದ ವೇತನ ಪರಿಷ್ಕರಣೆ ಮಾಡಬೇಕಾಗಿರುತ್ತದೆ; | ಸರ್ಕಾರದ ಗಮನಕ್ಕೆ ಬಂದಿದೆ.<br><br>ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳ ನೌಕರರ ವೇತನವನ್ನು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಪರಿಷ್ಕರಿಸುವ ಪದ್ಧತಿ ಜಾರಿಯಲ್ಲಿದ್ದು, ಪ್ರಸ್ತುತ ದಿನಾಂಕ:01.01.2020 ರಿಂದ ಹೊಸ ವೇತನ ಪರಿಷ್ಕರಣೆ ಆಗಬೇಕಿರುತ್ತದೆ. |
| ಇ | ವೇತನ ಪರಿಷ್ಕರಣೆ ಮಾಡಲು ಸರ್ಕಾರದಿಂದ ತೆಗೆದುಕೊಂಡಿರುವ ಕ್ರಮವೇನು;(ಮಾಹಿತಿ ನೀಡುವುದು) ಯಾವ ಕಾರಣಕ್ಕಾಗಿ ನಿಗದಿತ ದಿನಾಂಕದೊಳಗೆ ವೇತನ ಪರಿಷ್ಕರಣೆ ಮಾಡಿರುವುದಿಲ್ಲ; ಯಾವ ದಿನಾಂಕದೊಳಗೆ ಮತ್ತು ಯಾವ ದಿನಾಂಕದಿಂದ ಅನ್ವಯವಾಗುವಂತೆ ವೇತನ ಪರಿಷ್ಕರಣೆಯನ್ನು ಮಾಡಲಾಗುತ್ತದೆ; ವೇತನ ಪರಿಷ್ಕರಣೆಯ ಆರ್ಥಿಕ ಸೌಲಭ್ಯಗಳನ್ನು ಯಾವ ದಿನಾಂಕದಿಂದ ಪಾವತಿಸಲಾಗುತ್ತದೆ? (ಸಂಪೂರ್ಣ ವಿವರಗಳನ್ನು ಒದಗಿಸುವುದು) | ಈ ಕುರಿತು ಕ.ರಾ.ರ.ಸಾ.ನಿಗಮದ ಪ್ರಮುಖ ಕಾರ್ಮಿಕ ಸಂಘಟನೆಗಳು ಬೇಡಿಕೆಗಳ ಪಟ್ಟಿಯನ್ನು 2019ರ ಡಿಸೆಂಬರ್ ಅಂತ್ಯದಲ್ಲಿ ನೀಡಿದ್ದು, ತತ್ಸಂಬಂಧ ಪ್ರಾಥಮಿಕ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು. ಆದರೆ ಈ ಮಧ್ಯೆ, ರಾಜ್ಯ ರಸ್ತೆ ಸಾರಿಗೆ ನೌಕರರನ್ನು ರಾಜ್ಯ "ಸರ್ಕಾರಿ ನೌಕರ"ರೆಂದು ಪರಿಗಣಿಸಬೇಕು ಮತ್ತು ಸರ್ಕಾರಿ ನೌಕರರಿಗೆ ಸಿಗುವ ಎಲ್ಲಾ ಸೌಲಭ್ಯಗಳನ್ನು ತಮಗೆ ನೀಡಬೇಕು ಮತ್ತು ಆರನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಅಳವಡಿಸಿಕೊಳ್ಳಬೇಕು ಎಂಬ ಇತ್ಯಾದಿ ಬೇಡಿಕೆಗಳನ್ನು ಈಡೇರಿಸುವಂತೆ ನಿಗಮಗಳ ನೌಕರರ ಕೆಲವು ಒಕ್ಕೂಟಗಳು ಮುಷ್ಕರ ಹೂಡಿರುತ್ತಾರೆ.<br><br>ಈ ಹಂತದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗವು ಸಹ ರಾಜ್ಯದಲ್ಲಿ ವ್ಯಾಪಕವಾಗಿ ಹರಡಿ, ಕ್ರಮೇಣ ನಿಗಮಗಳ ಬಸ್ಸುಗಳ ಆಚರಣೆಯನ್ನು ಸ್ಥಗಿತಗೊಳಿಸಿರುವುದು, ಪರಿಣಾಮವಾಗಿ ನಿಗಮಗಳಿಗೆ ಯಾವುದೇ ಸಾರಿಗೆ ಆದಾಯ ಬಾರದೇ ನೌಕರರ ವೇತನ ನೀಡಲು ಸಹ ಆರ್ಥಿಕ ಮುಗ್ಗಟ್ಟು ಎದುರಾಗಿದ್ದರಿಂದ, ವೇತನ ಪರಿಷ್ಕರಣೆ ಆಗಿರುವುದಿಲ್ಲ.<br>ಮೇಲಿನ ಅನಿವಾರ್ಯ ಸಂದರ್ಭದಲ್ಲಿ ರಾಜ್ಯ ಸರ್ಕಾರವು ನೌಕರರ ವೇತನ ಪಾವತಿಗಾಗಿ ಅನುದಾನವನ್ನು ಬಿಡುಗಡೆ ಮಾಡಿ ಅನುಕೂಲ ಮಾಡಿಕೊಟ್ಟಿರುತ್ತದೆ.<br><br>ಸಾರಿಗೆ ಸಂಸ್ಥೆಗಳ ನೌಕರರ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ ನಾಲ್ಕೂ ಸಾರಿಗೆ ಸಂಸ್ಥೆಗಳ ವ್ಯವಸ್ಥಾಪಕರ ನಿರ್ದೇಶಕರುಗಳನ್ನೊಳಗೊಂಡ ಆಂತರಿಕ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿರುವ ವರದಿಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |

ಸಂಖ್ಯೆ: ಟಿಡಿ 347 ಟಿಸಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

Scanned with CamScanner